# ಗೇರು ಸಂಶೋಧನಾ ನಿರ್ದೇಶನಾಲಯದ ಪ್ರಭಾರ ನಿರ್ದೇಶಕರಾಗಿ

# ಡಾ.ಟಿ. ಎನ್. ರವಿಪ್ರಸಾದ ನೇಮಕ

ಪುತ್ತೂರಿನ ಗೇರು ಸಂಶೋಧನಾ ನಿರ್ದೇಶನಾಲಯ ಇದರ ಪ್ರಭಾರ ನಿರ್ದೇಶಕರಾಗಿ ದಿನಾಂಕ ೨೯.೧೦.೨೦೨೧ ರಂದು ಡಾ. ಟಿ. ಎನ್. ರವಿಪ್ರಸಾದ್ ಅವರು ಅಧಿಕಾರ ವಹಿಸಿ ಕೊಂಡಿರುತ್ತಾರೆ. ಡಾ. ರವಿಪ್ರಸಾದ ಇವರು ಇದೇ ಸಂಸ್ಥೆಯಲ್ಲಿ ೧೯೯೩ ರಿಂದ ಕೃಷಿ ಕೀಟ ಶಾಸ್ತ್ರದ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಗಾಲೇ ಇವರು ಗೇರುಬೆಳೆಯ ಪ್ರಮುಖ ಕೀಟಗಳಾದ ಕಾಂಡ ಹಾಗು ಬೇರು ಕೊರೆಯುವ ಹುಳು ಮತ್ತು ಚಹಾ ಸೊಳ್ಳೆಯ ನಿಯಂತ್ರಣದ ಬಗ್ಗೆ ಸಂಶೋಧನೆ ನಡೆಸಿದ್ದು ಹಲವಾರು ಪ್ರಭಾವಿ ಪರಿಹಾರೋಪಾಯಗಳನ್ನು ಸೂಚಿಸಿರುತ್ತಾರೆ. ಇವರುಮೂಲತಃ ತುಮಕೂರು ಜಿಲ್ಲೆಯ ಮಧುಗಿರಿಯವರಾಗಿದ್ದು ಬೆಂಗಳೂರಿನ ಕೃಷಿ ವಿಜ್ಞಾನ ವಿಶ್ವವಿದ್ಯಾನಿಲಯದಿಂದ ತಮ್ಮ ಪಿ.ಎಚ್ಡಿ.ಪದವಿಯನ್ನು ಚಿನ್ನದ ಪದಕದೊಂದಿಗೆಪಡೆದಿರುತ್ತಾರೆ. ಸದ್ಯಇವರುಚಹ ಸೊಳ್ಳೆಯ ಲೈಂಗಿಕ ಆಕರ್ಷಕಗಳ ( ಫೆರೊಮೋನ್ಗಳು ) ಬಗ್ಗೆ ಸಂಶೋಧನೆಯಲ್ಲಿ ನಿರತರಾಗಿದ್ದಾರೆ. ಇವರು ಇದೇ ಸಂಸ್ಥೆಯಲ್ಲಿ ಗೇರುಬೆಳೆಗಳ ಅಖಿಲ ಭಾರತ ಸಮನ್ವಿತ ಸಂಶೋಧನಾ ಯೋಜನೆಯಲ್ಲಿ ಮಾರ್ಗದರ್ಶನ ನೀಡಿದ ೧೫ ವರುಷಗಳ ಅನುಭವ ಹೊಂದಿದ್ದಾರೆ. ಹಲವಾರು ಸಂಶೋಧನಾ ಪ್ರಬಂಧಗಳನ್ನು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

Dr. T.N. Raviprasad assumed the charge of Director (Acting) at the ICAR-Directorate of Cashew Research, Puttur on 29-10-2021. His expertise is in the area of Entomology and he has done extensive research on management of Cashew Pests specially the Cashew Stem and Root Borer and Tea Mosquito Bug. He hails from Madhugiri of Tumkur district and obtained his Ph. D from University of Agricultural Sciences, GKVK, Bangalore with a gold medal. He is currently engaged in research on pheromones for insect management. He has 15 years of experience in managing the All India Coordinated Research Project on Cashew. He has published several research papers in national and international journals.